(೭) ದಕ್ಷಿಣ ಕನ್ನಡದಲ್ಲಿ ಕಡಲ ಕೊರೆತ ಅತಿ ಹೆಚ್ಚಾಗಿ ಕೋಟೆಪುರದ ೩೨ ಸಂಸಾರಗಳಂ ಬೀದಿಪಾಲಾಗಿರುವುದು

ಶ್ರೀ ಬಿ. ಎಂ. ಇದಿನಬ್ಬ.—ಅಧ್ಯಕ್ಷರೇ, ಈ ಬಾರಿ ಆಗಸ್ಟ್ ಮೊದಲ ವಾರದಲ್ಲಿ ದಕ್ಷಿಣ ಕನ್ನಡದಲ್ಲಿ ವಿಶೇಷ ಮಳೆ ಗಾಳಿ ಇದ್ದುದರಿಂದ ಕಡಲಿನ ಕೊರೆತ ಅತೀ ಜೋರಾಗಿತ್ತು. ಈ ರೀತಿ ಕಡಲಿನ ಕೊರೆತಕ್ಕೆ ಉಳ್ಳಾಳದ ಕೋಟೆಪುರ ಅತ್ಯಂತ ಕಷ್ಟನಷ್ಟಕ್ಕೆ ಒಳಗಾಯಿತು. ಕೋಟೆಪುರದಲ್ಲಿ ಕಡಲ ಕೊರೆತಕ್ಕೆ ೩೨ ಮನೆಗಳು ಹಾನಿಗೊಂಡು ನಾಶವಾಯಿತು. ಈ ೩೨ ಮನೆಯವರನ್ನು ಸಮೀಪದ ಶಾಲೆಗೆ ವರ್ಗಾಯಿಸಿ ಒಂದು ವಾರ ಗಂಜಿ ಕೇಂದ್ರ ಸ್ಥಾಪಿಸಲಾಯಿತು. ಕಂದಾಯ ಇಲಾಖೆಯವರು ಇದನ್ನೆಲ್ಲಾ ಪರಿಶೀಲನೆ ಮಾಡಿದ್ದಾರೆ. ಈ ೩೨ ಮನೆಯವರಿಗೆ ಕಂದಾಯ ಇಲಾಖೆಯವರು ಕೊಟ್ಟ ಪರಿಹಾರ ಎಷ್ಟು ? ಈ ೩೨ ಮನೆಯವರು ಕಡಲ ಬದಿಯಲ್ಲಿ ವಾಸ ಮಾಡುತ್ತಿದ್ದ ಬಡವರು. ಅವರು ಈಗ ಬೀದಿ ಪಾಲಾಗಿರುತ್ತಾರೆ. ಇವರಿಗೆ ನಿವೇಶನ ಇರುವ ಗ್ರಾಮದಲ್ಲಿ ನಿವೇಶನವನ್ನು ಕೊಟ್ಟು ಶಾಶ್ವತ ಪರಿಹಾರ ಸಿಗಬೇಕು. ಆದಕಾರಣ ಈ ೩೨ ಮನೆಯವರಿಗೆ ೫ ಸೆಂಟ್ಸ್ ಪ್ರಕಾರ ನಿವೇಶನವನ್ನು ತೀಘ್ರ ಒದಗಿಸಿಕೊಡಬೇಕಾದ ಕುರಿತು ಕಂದಾಯ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಎಸ್.ಆರ್. ಬೊಮ್ಮಾಯಿ.—ಮಾನ್ಯ ಸದಸ್ಯರು ಹೇಳಿರುವಂತೆ ಈ ಆಗಸ್ಟ್ ಮೊದಲನೇ ವಾರದಲ್ಲಿ ಸಾಮಾನ್ಯಕ್ಕಿಂತ ಹೆಚ್ಚು ಪ್ರಮಾಣದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಳೆ ಆಗಿರುತ್ತದೆ. ಆದರ ವಿವರ ಕೆಳಕಂಡಂತೆ ಇದೆ :—

ಬೆಳ್ತಂಗಡಿ—ಸಾಮಾನ್ಯ ೪೮೮, ವಾಸ್ತವ ೧೧೮೬

ಶೇಕಡಾವಾರು ಹೆಚ್ಚು ಆದ ಮಳೆ :—

ಬೆಳ್ತಂಗಡಿ–೧೬೪, ಬಂಟವಾಳ–೨೨೯, ಕುಂದಾಪುರ–೭೪, ಕಾರ್ಕಳ–೧೦೮, ಮಂಗಳೂರು–೭೪೭, ಪುತ್ತೂರು–೯೪, ಸುಳ್ಯ–೯೧, ಉಡುಪಿ–೧೧೪.

ಈ ಬಾರಿ ಮಳೆಯಿಂದಾಗಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಮುದ್ರ ಕೊರೆತ ಉಂಟಾಗಿ ಅಲ್ಲಲ್ಲಿ ನಷ್ಟ ಸಂಭವಿಸಿದ್ದು ಈ ನಷ್ಟವನ್ನು ತಡೆಗಟ್ಟುವ ಬಗ್ಗೆ ೨೦ ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡ ಬೇಕೆಂದು ಜಿಲ್ಲಾಧಿಕಾರಿಗಳು ಸರ್ಕಾರಕ್ಕೆ ವರದಿ ಕಳುಹಿಸಿದ್ದರು. ಸರ್ಕಾರವು ಸಮುದ್ರ ಕೊರೆತದಿಂದ ಆಗಿರುವ ನಷ್ಟವನ್ನು ತಡೆಗಟ್ಟುವ ಬಗ್ಗೆ ಈಗಾಗಲೇ ೫ ಲಕ್ಷ ರೂಪಾಯಿಗಳನ್ನು ೧೬–೭–೮೬ ರಂದು ಬಿಡುಗಡೆ ಮಾಡಿದೆ. ಇನ್ನೂ ೧೦ ಲಕ್ಷ ರೂಪಾಯಿಗಳನ್ನು ಕೂಡಲೇ ಬಿಡುಗಡೆ ಮಾಡಲಾಗುತ್ತದೆ. ಈ ಸಮುದ್ರ ಕೊರೆತದಿಂದ ಮಂಗಳೂರು ಸಮೀಪದ ಕೋಟೆಪುರ ಗ್ರಾಮದಲ್ಲಿ ೩೨ ಮನೆಗಳು ಹಾನಿ ಗೊಂಡು ನಾಶವಾಗಿರುತ್ತವೆಂದು ಸದಸ್ಯರು ಗಮನಸೆಳೆವ ಸೂಚನಾ ಪತ್ರದಲ್ಲಿ ತಿಳಿಸಿದ್ದಾರೆ. ಜಿಲ್ಲಾಧಿ ಕಾರಿಗಳಿಗೆ ಸಂಪರ್ಕಿಸಿ ಈ ವಿಷಯದ ಬಗ್ಗೆ ಮಾಹಿತಿ ಕೇಳಿದಾಗ, ಅವರು ೨೭ ಮನೆಗಳು ಮಾತ್ರ ನಾಶವಾಗಿರುವುದಾಗಿ ಹಾಗೂ ಆ ನೊಂದ ಸಂತ್ರಸ್ತರು ೮,೧೦೦ ರೂಪಾಯಿಗಳ ನಷ್ಟವನ್ನು ಅನುಭವಿಸಿರುವುದಾಗಿಯೂ ತಿಳಿಸಿರುತ್ತಾರೆ. ಮಂಗಳೂರು ತಹಶೀಲ್ದಾರರು ಈಗಾಗಲೇ ಹಾಲೀ ಸರ್ಕಾರಿ ಆದೇಶದ ಪ್ರಕಾರ ೬,೧೦೦ ರೂಪಾಯಿಗಳನ್ನು ಪರಿಹಾರ ನೀಡಿರುತ್ತಾರೆ. ಸಂತ್ರಸ್ತರಿಗೆ ಸಮೀಪದ ಶಾಲೆಗೆ ವರ್ಗಾಯಿಸಿ ಒಂದು ವಾರ ಗಂಜೀ ಕೇಂದ್ರ ಸ್ಥಾಪಿಸಲಾಗಿದ್ದು ಆ ಗಂಜಿ ಕೇಂದ್ರಕ್ಕೆ ೫ ಕ್ವಿಂಟಾಲ್ ಅಕ್ಕಿಯನ್ನು ಸಹಾ ಕೊಟ್ಟಿರುತ್ತಾರೆ. ಸೊಂದವರಿಗೆ ಪುನರ್ ವಸತಿ ಕಲ್ಪಿಸಲು ಮಂಗಳೂರು ತಾಲ್ಲೂಕು ಪೆರಮನ್ನೂರು ಗ್ರಾಮದಲ್ಲಿ ತಲಾ ೫ ಸೆಂಟ್ಸ್ ವಸತಿ ನಿವೇಶನ ಹಂಚುವ ಬಗ್ಗೆ ಪರಿಶೀಲಿಸಲಾಗುತ್ತಿದೆ.

ಅವರಿಗೆಲ್ಲಾ ಜನತಾ ಮನೆಗಳನ್ನು ಕೊಡತಕ್ಕ ವಿಚಾರ ಮಾಡುತ್ತೇವೆ.